ಶ್ರೀ ರಾಮಕೃಷ್ಣ ಹೆಗ್ಗಡೆ.—ಅರೋಲಿ ಹಳ್ಳಿ, ದಾನರಕಳ್ಳಿ, ಕಳ್ಳೀಹಳ್ಳಿ, ನನ್ಯಾಸಿ, ಕೊಡ ಮಟ್ಟಿ ಮುಂತಾದ ಸುಮಾರು 8 ಹಳ್ಳಿಗಳಲ್ಲಿ ಬಾವಿಗಳ ಕೆಲಸ ಸ್ವಲ್ಪ, ನಿಧಾನವಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಳ್ಳೀ ಹಳ್ಳ ಗ್ರಾಮದಲ್ಲಿ ಬಾವಿಗೋಸ್ಕರ ಸುಮಾರು 19—20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ತಿಳಿದು ಬಂದಿದೆ, ಹಾಗಾದರೆ ಆ ಬಾವಿಯ ಕೆಲಸ ಪೂರ್ತಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಂನ್ಯಾನಾಮಳೆ 1958—59 ನೇ ಸಾಲಿನಲ್ಲಿ ಎಲ್ಲೆಲ್ಲಿ ಬಾವಿಗಳನ್ನು ಪ್ರಾರಂಭಮಾಡಿ ಅವುಗಳನ್ನು ಪೂರ್ತಿ ಮಾಡದೇ ಇದ್ದಾರೋ ಅಲ್ಲಿ ಅವುಗಳನ್ನು ಪೂರ್ತಿಮಾಡುವುದಕ್ಕೆ ಸರ್ಕಾರದವರು ನಿರ್ದೇಶನ ಕೊಟ್ಟು ಅವುಗಳನ್ನು ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೀಗೆ ಅಗಿರತಕ್ಕಂಥ ಉದಾಹರಣೆ ಬಹಳ ಕಡಿಮೆ. ಎಲ್ಲೆಲ್ಲಿ ಬಾವಿಯ ಕೆಲಸ ನಿಧಾನವಾಗಿದೆಯೋ ಅಲ್ಲೆಲ್ಲಾ ಅದು ನಿಧಾನವಾಗಲು ಕೆಲವು ಕಾರಣಗಳಿರುತ್ತವೆ. ಕೆಲವು ಸಂದರ್ಭಗಳಲ್ಲಿ ಅವುಗಳ ಎಸ್ಟಿಮೇಟ್ ತಯಾರು ಮಾಡಿರುವುದಿಲ್ಲ, ಕೆಲವು ಸಂದರ್ಭದಲ್ಲಿ ಆ ಕೆಲಸವನ್ನು ಕಂಟ್ರಾಕ್ಟರಿಗೆ ಕೊಟ್ಟು ಅವರು ಕೆಲಸವನ್ನು ಮಾಡದೇ ಇದ್ದರೆ, ಆ ಕಂಟ್ರಾಕ್ಟರಿಗೆ ನೋಟೀಸ್ ಕೊಟ್ಟು ಬೇರೆ ಕಂಟ್ರಾಕ್ಟರಿಂದ ಆ ಕೆಲಸವನ್ನು ಮಾಡಿಸಬೇಕಾಗುತ್ತದೆ. ಕೆಲವು ಬಾವಿಗಳಲ್ಲಿ ಕಲ್ಲು ಸಿಕ್ಕಿ ನಿಧಾನವಾಗಿರುತ್ತದೆ; ಆ ಕೆಲಸ ನಿಧಾನವಾಗುವುದಕ್ಕೆ ಇದೆಲ್ಲಾ ಕಾರಣ ಗಳಿರುತ್ತವೆ ಎಲ್ಲೆಲ್ಲಿ ನಿಧಾನವಾಗಿದೆಯೋ ಅಲ್ಲೆಲ್ಲಾ ಆದಷ್ಟು ಜಾಗ್ರತೆ ಮುಗಿಸಬೇಕು ಎಂದು ಹೇಳಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಳ್ಳಿಹಳ್ಳ ಗ್ರಾಮದಲ್ಲಿರುವ ಬಾವಿಗೆ 19—20 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬಾವಿಯ ಕಟ್ಟಡ ಪೂರ್ತಿಯಾಗಿ ನಂತರ ಅದು ಕುಸಿದುಬಿತ್ತು. ಆ ಬಾವಿಯ ಮೆಜರ್‌ಮೆಂಟ್ ಅನ್ನು ಕೊಡುವಾಗ ಅದು ಕಡಿಮೆ ಆಳ ಇದ್ದರೂ ಜಾಸ್ತಿ ಮೆಜರ್ ಮೆಂಟ್ ಕೊಟ್ಟಿದ್ದಾರೆ. ಇದರ ಬಗ್ಗೆ ಸಚಿವರು ನಿಗಾ ತೆಗೆದುಕೊಂಡು ಯಾರು ಹಣವನ್ನು ದುರುಪ ಯೋಗ ಮಾಡಿದ್ದಾರೋ ಅವರ ಬಗ್ಗೆ ಮಾನ್ಯ ಸಚಿವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವಶ್ಯವಾಗಿ ತೆಗೆದುಕೊಳ್ಳುತ್ತೇವೆ.

Supply of Electricity to several Villages in Ron Taluk, Dharwar District.

*Q.—163. **Sri A. J. DODDAMETI** (Ron).—

Will the Government be pleased to state :—

(*a*) whether it is a fact that sanction has been accorded to draw power line and supply of electricity to Halkeri, Itagi, Hullur *via* Kothabal and Hirehala, Ron *via* Belavanike and Yavagal in Ron Taluk, Dharwar District together with the dates of sanction ;

(*b*) whether it is also a fact that the work has not yet been started even though some of the estimates relating to the said power line have been sanctioned during December 1963 ;

(*c*) when the work of drawing the above power line would be commenced ;

(*d*) whether it is a fact that a representation for the supply of power to Savadi and Mallapur villages of Ron Taluk has been made and if so, when the power would be supplied ?

A.—Sri S. NIJALINGAPPA (Chief Minister).—

(*a*) Yes. Sanctions to the villages in Ron Taluk are as follows:—

1	Halkeri	...	18-12-1963
2	Yavagal	...	29-2-1964
3	Itagi	...	19-8-1964
4	Belavanki	...	2-11-1963
5	Hullur, Kothabal and Hirebala	...	17-6-1964

(*b*) Two estimates were sanctioned during December 1963. The works could not be Taken up for want of essential line materials.

(*c*) Arrangements are being made to take up the work now and will be completed early in 1965-66.

(*d*) Yes. Estimate has been sanctioned for Savadi. Estimate of Mallapur is under scrutiny. Power will be supplied during 1965-66.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ರೋಣ್ ತಾಲ್ಲೂಕಿನಲ್ಲಿರುವ ಕೆಲವು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಮಂಜೂರು ಮಾಡಿರುವ ತಾರೀಕುಗಳನ್ನು ಕೊಡಲಾಗಿದೆ. ಸಾಮಾನ್ಯವಾಗಿ ಆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಮಂಜೂರಾಗಿ ಹಿಂದೂಕಾಲು ವರ್ಷ, 6 ತಿಂಗಳು, 3 ತಿಂಗಳು, 2 ತಿಂಗಳು ಹೀಗೆ ಆಗಿದೆ. ಇಷ್ಟು ವಿಳಂಬವಾದರೂ ಕೂಡ ಆ ಕೆಲಸಗಳು ಇನ್ನೂ ಪ್ರಾರಂಭವಾಗಿಲ್ಲ, ಇದಕ್ಕೆ ಕಾರಣವೇನು ?

†ಶ್ರೀ ಎಸ್. ನಿಜಲಿಂಗಪ್ಪ.—ವಿದ್ಯುತ್ ಲೈನುಗಳನ್ನು ಹಾಕಲು ಬೇಕಾದ ವಸ್ತುಗಳ ಅಭಾವವೇ ಕಾರಣ. ತಂತಿ ಇಲ್ಲದೆ ಇರುವುದು, ಮರ ಇಲ್ಲದೇ ಇರುವುದು, ಸಣ್ಣ ಸಣ್ಣ ಟ್ರಾನ್ಸ್‌ಫಾರ್ಮರ್‌ಗಳು ಇಲ್ಲವೇ ಇರುವುದು, ಇತ್ಯಾದಿ ಲೈನಿನ ಸಾಮಗ್ರಿಗಳು ದೊರೆಯದೆ ಇದ್ದ ಕಾರಣದಿಂದ ಆ ಕೆಲಸವನ್ನು ಮಾಡುವುದು ಸ್ವಲ್ಪ ತಡವಾಗಿದೆ. 1965-66 ನೇ ಇಸವಿಯಲ್ಲಿ ಅದನ್ನು ಪೂರೈಸುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮುಲ್ಲಾಪುರ ಗ್ರಾಮಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಅದಕೆ. ಸಂಬಂಧಪಟ್ಟ ಅಂದಾಜನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ, ಅಲ್ಲಿಯ ಕೆಲಸವನ್ನು 1965-66 ನೇ ಇಸವಿಯಲ್ಲಿ ಪೂರ್ತಿ ಮಾಡುವ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—1963 ನೇ ಇಸವಿಯಲ್ಲಿ ಯಾವುದು ಸ್ಯಾಂಕ್ಷನ್ ಆಗಿದೆಯೋ ಅದನ್ನು ಪೂರ್ತಿಮಾಡುತ್ತೇವೆ. ಬಾಕಿಯಾದ್ದಕ್ಕೆ ಅವಶ್ಯಕವಾದ ವಿದ್ಯುತ್ ಲೈನಿನ ಸಾಮಗ್ರಿಗಳು ಬಂದಾಗ ಅವುಗಳನ್ನು ಪೂರ್ತಿ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕೆಲವು 1963 ನೇ ಡಿಸೆಂಬರ್ ತಿಂಗಳಿನಲ್ಲಿ ಸ್ಯಾಂಕ್ಷನ್ ಆಗಿವೆ. ಕೆಲವು 1964ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಸ್ಯಾಂಕ್ಷನ್ ಆಗಿವೆ. ಹೀಗೆ ನಡುವೆ ಸ್ವಲ್ಪ ದಿವಸ ಮಾತ್ರ ಒಂದಕ್ಕೊಂದಕ್ಕೆ ವ್ಯತ್ಯಾಸವಾಗಿದೆ. ಆದ್ದರಿಂದ 1964ನೇ ಇಸವಿಯೆಲ್ಲಿಯೂ ಸ್ಯಾಂಕ್ಷನ್ ಆದ ಕೆಲಸಗಳನ್ನು ಪೂರ್ತಿ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—1963ನೇ ಇಸವಿಯಲ್ಲಿ ಸ್ಯಾಂಕ್ಷನ್ ಆದುವುಗಳಿಗೂ, 1964ನೇ ಇಸವಿಯಲ್ಲಿ ಸ್ಯಾಂಕ್ಷನ್ ಆದುವುಗಳಿಗೂ 8 ತಿಂಗಳು, 10 ತಿಂಗಳು ಹೀಗೆ ಸ್ವಲ್ಪ ವ್ಯತ್ಯಾಸ ಜಾಸ್ತಿಯಾಗುತ್ತದೆ. ಆದಷ್ಟು ಜಾಗ್ರತೆ ಆ ಕೆಲಸಗಳನ್ನು ಮಾಡತಕ್ಕಂಥಾದ್ದು ನಮ್ಮ ಉದ್ದೇಶ. ಅದಕ್ಕೆ ಬೇಕಾದ ವಸ್ತುಗಳು ಸಿಕ್ಕಬೇಕಾಗಿದೆ, ಅವು ಸಿಕ್ಕುತ್ತವೆ, ಅವು ಸಿಕ್ಕಿದ ತಕ್ಷಣ ಆ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಸವಡಿ ಗ್ರಾಮಕ್ಕೆ ಸಂಬಂಧಪಟ್ಟ ಅಂದಾಜನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ, ಅದು ಏನಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಇನ್‌ಫರ್‌ಮೇಷನ್ ಈಗ ನನ್ನಲ್ಲಿ ಇಲ್ಲ.

† Indicates that the remarks or speeches have not been revised by the member concerned.

ಶ್ರೀ ಸಿದ್ದಯ್ಯ ಕಾಲಿಮಠ್.—ಸ್ವಾಮಿ, ಪ್ರತಿಯೊಂದು ಸಾರಿಯೂ ಕೂಡ ಅವಶ್ಯಕವಾದ ರೈಸಿನ ಸಾಮಗ್ರಿಗಳು ದೊರೆಯದಿದ್ದ ಕಾರಣ ಆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಲಲ್ಲ ಎಂದು ಹೇಳುತ್ತಿದ್ದೀರಿ ; ಹಾಗಾದರೆ ನಮ್ಮ ದೇಶದಲ್ಲಿ ಯಾವ ಯಾವ ಮೆಟೀರಿಯಲ್ಸ್ ತಯಾರಾಗುತ್ತವೆ, ಪರದೇಶದಿಂದ ಯಾವ ಯಾವ ಮೆಟೀರಿಯಲ್ಸ್ ತರಿಸಬೇಕಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿ ಕಂಬಗಳು ಸಿಗುತ್ತವೆ. ಟವರ್‌ಗಳಿಗೆ ಬೇಕಾಗುವ ಕಬ್ಬಿಣ ಸಿಕ್ಕುತ್ತದೆ, ಸಣ್ಣಸಣ್ಣ ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಇಲ್ಲಯೇ ತಯಾರು ಮಾಡುತ್ತಿದ್ದಾರೆ, ದೊಡ್ಡ ದೊಡ್ಡ ಟ್ರಾನ್ಸ್‌ಫಾರ್ಮರ್‌ಗಳನ್ನು ಪರದೇಶದಿಂದ ತರಿಸಬೇಕಾಗುತ್ತದೆ. ತಂತಿಯು ಸಿಕ್ಕುವುದು ಬಹಳ ಕಷ್ಟ, ಅದನ್ನು ಪರದೇಶದಿಂದ ತರಿಸಬೇಕಾಗುತ್ತದೆ. ಈಗ ನಮ್ಮ ದೇಶದಲ್ಲಿ ಕಾಪರ್ ಮತ್ತು ಅಲ್ಯೂಮಿನಿಯಂ ವೈರನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1966ನೇ ಇಸವಿ ಅಚ್ಚುರೊಳಗಾಗಿ ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಖಂಡಿತಾ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕೇಂದ್ರಸರ್ಕಾರದವರು ಮಹಾತ್ಮ ಗಾಂಧೀಜಿಯವರ ಶತ ಮಾನೋತ್ಸವವನ್ನು ಆಚರಿಸುವ ವೇಳೆಗೆ ನುಮಾರು ಒಂದು ಲಕ್ಷ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳಿದ್ದರು, ಆ ವೇಳೆಗೆ ಈ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಬರುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಬರುತ್ತದೆ ಎಂದು ನಾನು ಹೇಳಬಲ್ಲೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂಗಳೂರಿನಲ್ಲಿ ಕೆಲವು ವೈರುಗಳನ್ನು ದಾಸ್ತಾನು ಮಾಡಿದ್ದರು. ಅದನ್ನು ಇಲ್ಲಿಗೆ ವಾಪಸ್ಸು ತರಬೇಕೆಂದು ಹೇಳಿದ್ದರು. ಅದನ್ನು ಏನು ಮಾಡುತ್ತೀರಿ ?

Mr. SPEAKER.—How does it arise here ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲೆಲ್ಲ ಇದೆಯೆಂದು ಮಾನ್ಯ ಸದಸ್ಯರು ವರ್ತಮಾನ ಕೊಟ್ಟರೆ ಒಳ್ಳೆಯದು. ನಾವು ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಂತಿ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಅಭಾವ ಇದೆ ಎಂದು ತಾವು ಹೇಳಿದಿರಿ, ವರ್ತಕರು ಅದನ್ನು ಸಪ್ಲೈ ಮಾಡುತ್ತೇವೆ ಎಂದರೆ ಕಡಿಮೆ ರೇಟಿಗೆ ಇರಾಖೆಗೆ ಸಪ್ಲೈ ಮಾಡುತ್ತೀರಾ ಎಂದು ಇರಾಖೆಯವರು ಹೇಳುತ್ತಾರೆ ; ಆದ್ದರಿಂದ ಹೆಚ್ಚು ರೇಟು ಕೊಟ್ಟು ಆ ಸಾಮಾನುಗಳನ್ನು ತರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥಾ ಪುಕಾರು ಯಾವುದೂ ನಮಗೆ ಬಂದಿಲ್ಲ.

Irrigation Master Plan for Tumkur District.

*Q.—195. **Sri R. KENCHAPPA** (Pavagada).—

Will the Government be pleased to state:—

(*a*) When the irrigation master plan for Tumkur District was prepared and the estimated cost to the same ;

(*b*) The number of Minor and Major works estimated to be taken up in the above District (Taluk-wise information may please be furnished);

(*c*) Out of them, the number of Works completed (Taluk-wise information may be furnished) ?

*A.—**Sri ALUR HANUMANTHAPPA** (Deputy Minister for Minor Irrigation).—

(*a*) The Master Plan (1964) is yet to be finalised.

(*b*) Does not arise in view of reply to Clause (*a*).

(*c*) Does not arise in view of reply to Clause (*a*)